ಮಗ ಶ್ರೀಕಂಠ ಎಸ್.ಎಸ್.ಎಲ್.ಸಿ.ಯಲ್ಲಿ ನಾಲ್ಕು ಬಾರಿ ಪರೀಕ್ಷೆಗೆ ಕೂತು ಪಾಸು ಅಂತ ಅನ್ನಿಸಿಕೊಳ್ಳುವದರಷ್ಟರಲ್ಲಿ ಮೂರು ಕೆರೆ ನೀರು ಕುಡಿದಿದ್ದ. ಹೋಗಲಿ, ಎಲ್ಲರೂ ನಾಲ್ಕಕ್ಷರ ಕಲಿತರೇನೇ ಉದ್ಧಾರವಾಗೋದಿಲ್ಲ. ಬದುಕಲು ನೂರಾರು ದಾರಿಗಳುಂಟು ಅಂದುಕೊಂಡರೂ ಅವನಿಗೆ ಯಾವ ಕೆಲಸವೂ ಬರ್ಕತ್ತಾಗಲಿಲ್ಲ. ಕವಳ ಹಾಕಿಕೊಂಡು ಅವರಿವರ ಮನೆ ಸುತ್ತುವುದು, ಕ್ರಿಕೆಟ್ ಆಡುವುದು, ಊರಿನವರಿಗೆ ಬಿಟ್ಟಿ ಕೆಲಸ ಮಾಡಿಕೊಟ್ಟು ಶಾಭಾಸ್‌ಗಿರಿ ಪಡೆಯುವದು, ಗುಟ್ಕಾ, ಸಿಗರೇಟ್ ಪ್ರಿಯನಾಗಿ ಒಟ್ಟಾರೆ ಊರಿನವರ ಲೆಕ್ಕದಲ್ಲಿ 'ಪೋಲಿ' ಪಟ್ಟ ಗಿಟ್ಟಿಸಿಕೊಂಡಿದ್ದ. ಇದರಿಂದಾಗಿ ಹಿರಿಯಣ್ಣ ಹೈರಾಣಾಗಿ ಹೋಗಿದ್ದ. ಇತ್ತೀಚೆಗಂತೂ ಮಗ ಏತಿ ಅಂದರೆ ಪ್ರೇತಿ ಅನ್ನುತ್ತಿದ್ದ. ಹಾಗಾಗಿ ಇವ ಸುಲಭವಾಗಿ ದಡ ಹತ್ತುವವನಲ್ಲ ಎಂದು ಅಪ್ಪನೆನಿಸಿಕೊಂಡವ ಆದಾಗಲೇ ಖಚಿತಪಡಿಸಿಕೊಂಡಿದ್ದ.

★★★

ಮುಂದಿನ ಒಂದು ವರ್ಷದ ಅವಧಿಯಲ್ಲಿ ಹೈವೇ ಪ್ರಕರಣ ತಣ್ಣಗಾಗಿತ್ತು. ಹಾಗಾಗಿ ಊರಿನ ಜನರೆಲ್ಲ ಹೆಚ್ಚು–ಕಡಿಮೆ ಈ ವಿಷಯವನ್ನು ಮರೆತೇಬಿಟ್ಟಿದ್ದರು. ಆದರೆ ಮುಂದು ಒಂದು ದಿನ ರಸ್ತೆ ಅಭಿವೃದ್ಧಿ ಪ್ರಾಧಿಕಾರದ ಕಚೇರಿಯಿಂದ ಹಿರಿಯಣ್ಣನಿಗೆ ಒಂದು ರಿಜಿಸ್ಟರ್ಡ್ ಟಪಾಲು ಬಂತು. ಅದರ ಸಾರಾಂಶವಿಷ್ಟು: ಈ ಹಿಂದೆ ರಸ್ತೆ ಅಭಿವೃದ್ಧಿಗಾಗಿ ನಿಮ್ಮ ಆಸ್ತಿಯನ್ನು ಸರ್ವೇ ಮಾಡಲಾಗಿತ್ತು. ಇದೀಗ ಈ ನೋಟೀಸು ತಲುಪಿದ ಎರಡು ತಿಂಗಳಲ್ಲಿ ನಿಮ್ಮ ಮನೆಯನ್ನು ಖಾಲಿ ಮಾಡತಕ್ಕದ್ದು. ನಿಮ್ಮ ಮುಕ್ಕಾಲು ಎಕರೆ ತೋಟಕ್ಕೆ ರೂ. 40,68,320/– ಹಾಗೂ ಮನೆಗೆ 1,22, 64, 668/– ಹೀಗೆ ಒಟ್ಟೂ ರೂ.

